ದಿನಾಂಕ: 25.09.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಕೆ ವಿ ಡಿ ವಕೀಲರಿಂದಃ**

ನನ್ನ ತಾತ ರುದ್ರಪ್ಪನಿಗೆ ಸರ್ವೆ ನಂ.16/1 ರಲ್ಲಿ 4 ಎಕರೆ 1 ಗುಂಟೆ ಇತ್ತು ಎಂದರೆ ಸರಿಯಲ್ಲ. ಸರ್ವೆ ನಂ.16/2 ರಲ್ಲಿ 2 ಎಕರೆ 30 ಗುಂಟೆ ಆಸ್ತಿ ನನ್ನ ತಾತನ ಹೆಸರಿಗೆ ಇತ್ತು ಎಂದರೆ ಸರಿಯಲ್ಲ. ಸರ್ವೆ ನಂ.16/3 ನನ್ನ ತಾತನ ಹೆಸರಿನಲ್ಲಿ 6 ಎಕರೆ 14 ಗುಂಟೆ ಇತ್ತು. 16/3 ರಲ್ಲಿ 3 ಕರೆ 14 ಗುಂಟೆ ಯನ್ನು ನನ್ನ ತಂದೆ ಮತ್ತು ನನ್ನ ಸಹೋದರ 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. ಸರ್ವೆ ನಂ.16/3 ರಲ್ಲಿ ಈಗ 3 ಎಕರೆ ಮಾತ್ರ ಇದೆ ಎಂದರೆ ನಿಜ ಸರ್ವೆ ನಂ.16/3 ರಲ್ಲಿ ಮಾರಾಟ ಮಾಡಿದ 3 ಎಕರೆ 14 ಗುಂಟೆ ಆಸ್ತಿ ಈಗ ಸರ್ವೆ ನಂ.16/5 ಆಗಿದೆ ಎಂದರೆ ಸರಿಯಲ್ಲ. ಸರ್ವೆ ನಂ.11/2, 7 ಎಕರೆ 11 ಗುಂಟೆ ಇದೆ. ಇವೆಲ್ಲವೂ ನನ್ನ ತಾತನ ಹೆಸರಿಗೆ ಇದ್ದಂತಹ ಆಸ್ತಿಗಳು ಎಂದರೆ ನಿಜ. ಸಾಕ್ಷಿ ಮುಂದುವರೆದು ಈಗ ಲಕ್ಷ್ಮಿಪತಿ ಹೆಸರಿಗೆ ಇದೆ ಎಂದು ನುಡಿಯುತ್ತಾರೆ.

ಲಕ್ಷ್ಮಿಪತಿ ಹೆಸರಿಗೆ ಹೇಗೆ ಬಂತು ಎಂದು ಗೊತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ದೊಡ್ಡಪ್ಪ ಆಸ್ತಿ ಬ್ಯಾಂಕ್ ಗೆ ಹರಾಜಿಗೆ ಬಂದಾಗ ಹಣವನ್ನು ನನ್ನ ತಂದೆ ಕಟ್ಟಿದ್ದರಿಂದ ನನಗೆ ಆಸ್ತಿ ಬೇಡವೆಂದು ಹೇಳಿ ನನ್ನ ತಂದೆ ಹೆಸರಿಗೆ ಬರೆದು ಕೊಟ್ಟಿರುತ್ತಾರೆ. ಬರೆದು ಕೊಟ್ಟ ದಾಖಲೆಗಳು ಸಿವಿಲ್ ನ್ಯಾಯಾಲಯದಲ್ಲಿ ಇರುತ್ತವೆ. ಸಾಲ ತೀರಿಸಿದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ, ಸಾಕ್ಷಿ ಮುಂದುವರೆದು ನನ್ನ ತಂದೆ ಸಾಲ ತೀರಿಸಿದ್ದರು ಈಗ ನನ್ನ ಬಳಿ ದಾಖಲೆ ಇಲ್ಲ ಎಂದು ಹೇಳುತ್ತಾರೆ. ಸರ್ವೆ ನಂ.16/1 ಈಗ ನನ್ನ ಹೆಸರಿಗೆ ಇರುತ್ತದೆ. 16/1 ನ್ನು ನನ್ನ ತಂದೆ ನನಗೆ ದಾನ ಮಾಡಿರುತ್ತಾರೆ. ನನ್ನ ತಂದೆ ನನಗೆ ಆಸ್ತಿಯನ್ನು ದಾನ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದರಿಂದ ದಾನ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

ಲಕ್ಷ್ಮಿಪತಿಯಪ್ಪನಿಗೆ ಒಟ್ಟು 4 ಜನ ಮಕ್ಕಳು. ಅವರ ಹೆಸರು ನರಸಿಂಹಮೂರ್ತಿ, ಸುಜಾತ, ಧನಲಕ್ಷ್ಮಿ ಮತ್ತು ನಾನಾಗಿರುತ್ತೇನೆ. ನನ್ನ ಅಣ್ಣ ನರಸಿಂಹಮೂರ್ತಿ ಈಗ ಮೃತ ಪಟ್ಟಿರುತ್ತಾರೆ. ಅವರ ಹೆಂಡತಿ ಹೆಸರು ಸುನಂದಮ್ಮ. ಅವರಿಗೆ ಮಕ್ಕಳು ಇರುವುದಿಲ್ಲ. ನಿಡಿ-1 ರಲ್ಲಿ ಬರೆದ ವಿಚಾರ ತಿಳಿದುಕೊಂಡಿರುತ್ತೇನೆ. ನಿಡಿ-1 ನ್ನು ಸುನಂದಮ್ಮ ಧನಲಕ್ಷ್ಮಿಗೆ ಬರೆದುಕೊಟ್ಟಿರುತ್ತಾರೆ. ಸುನಂದಮ್ಮನವರು ತನಗೆ ಗಂಡನ ಮನೆ ಆಸ್ತಿ ಬೇಡ ಎಂದು ಧನಲಕ್ಷ್ಮಿ ಹೆಸರಿಗೆ ಬರೆದು ಕೊಟ್ಟಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು